**AKSHARASURYA**
Peer-Reviewed, Multi Lingual E-Journal
Volume – 01, Issue – 02, November 2022.

# ಅಳಿವಿನಿಂದ ಉಳಿವಿಗೆ ಕಾದಂಬರಿ ವಿಶ್ಲೇಷಣೆ

**ಲೇಖನ ಬರಹಗಾರರು**
**ಡಾ. ಹೆಚ್.ಎಂ. ಮಲ್ಲಿಕಾರ್ಜುನ**
ಸಹಾಯಕ ಕನ್ನಡ ಪ್ರಾಧ್ಯಾಪಕರು
ಮಹಾಜನ ಪ್ರಥಮದರ್ಜೆ ಕಾಲೇಜು
ಜಯಲಕ್ಷ್ಮೀಪುರಂ ಮೈಸೂರು 570012
ಮೊ.ಸಂ. 8971665734
ಮೇಲ್: mallikarjunahm2012@gmail.com

**ಸಹಲೇಖಕರು**
**ಡಾ. ಮೀನಾಕ್ಷಿ**
ಸಹಾಯಕ ಕನ್ನಡ ಪ್ರಾಧ್ಯಾಪಕರು
ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಊಟಿ ರಸ್ತೆ ೫೭೦೦೨೫
ಮೊ. ೯೧೬೪೬೬೧೫೩೫
ಮೇಲ್: rmeenakshi92@gmail.com

ಕನ್ನಡ ಸಾಹಿತ್ಯವನ್ನು ಸಾಂಸ್ಕೃತಿಕ ನೆಲೆಯಲ್ಲಿ ಅಧ್ಯಯನ ನಡೆಸಿದಾಗ ಇಡೀ ಜಗತ್ತಿಗೆ ಮಾದರಿಯಾಗಬಹುದಾದಂತಹ ಭಕ್ತಿ ಚಳುವಳಿಯು ೧೨ನೇ ಶತಮಾನದಲ್ಲಿ ಜರುಗುತ್ತದೆ. ಈ ಸಮಾಜದಲ್ಲಿ ಅಸ್ತಿತ್ವದಲ್ಲಿದ್ದ ಜಾತೀಯತೆ, ಶೋಷಣೆ, ಕಂದಾಚಾರ, ಮೇಲು–ಕೀಳು, ಮೌಢ್ಯತೆ ಇವೆಲ್ಲವೂ ತಳಸಂಸ್ಕೃತಿಯ ಜನರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ, ಶೈಕ್ಷಣಿಕವಾಗಿ ಮುಂದೆ ಬರಲು ಬಿಟ್ಟಿರಲಿಲ್ಲ ಮತ್ತು ಅವಕಾಶವನ್ನು ನೀಡಿರಲಿಲ್ಲ. ಶತಮಾನಗಳಿಂದ ಇವರು ಮೇಲ್ವರ್ಗದವರಿಗೆ ಸಹಾಯಕವಾಗುವಂತಹ ವೃತ್ತಿಯನ್ನು ಅನುಸರಿಸುತ್ತಾ ದಯನೀಯವಾದ ಬದುಕನ್ನು ಸಾಗಿಸುತ್ತಿದ್ದರು. ಅಸ್ಪೃಶ್ಯರು ಮೇಲ್ವರ್ಗದವರ ಕಣ್ಣಿಗೆ ಕಾಣಿಸಿಕೊಳ್ಳುವಂತಿರಲಿಲ್ಲ. ಅವರು ಬೀದಿಯಲ್ಲಿ ನಡೆದುಕೊಂಡು ಹೋಗುವಾಗ ಅವರ ನೆರಳೂ ಕೂಡಾ ನೆಲಕ್ಕೆ ಬೀಳದಂತೆ ಸರಿಯಾಗಿ ಮಧ್ಯಾಹ್ನದ ಸಮಯಕ್ಕೆ ಹೋಗಬೇಕಾಗಿತ್ತು. ಅದಲ್ಲದೇ ಉಗುಳಲು ಬಾಯಿಯ ಬಳಿ ಕರಟವನ್ನು ಕಟ್ಟಿಕೊಳ್ಳಬೇಕಾಗಿತ್ತು. ತಾನು ನಡೆದ ಹೆಜ್ಜೆ ಗುರುತುಗಳು ಅಳಿಸಿಹೋಗುವಂತೆ ಸೊಂಟದ ಹಿಂದೆ ಕಸಪೊರಕೆಯನ್ನು ಕಟ್ಟಿಕೊಂಡು ಸಂಭೋಳಿ ಎಂದು ಎಚ್ಚರಿಸುತ್ತಾ ನಡೆಯಬೇಕಾಗುತ್ತಿತ್ತು. ಮನುಷ್ಯನನ್ನು ಪ್ರಾಣಿಗಿಂತಲೂ ಕಡೆಯಾಗಿ ನಡೆಸಿಕೊಳ್ಳುತ್ತಿದ್ದ ದಿನಗಳವು. ವೇದಗಳನ್ನು ಜನಸಾಮಾನ್ಯರು ಕದ್ದು ಕೇಳಿಸಿಕೊಂಡರೆ ಕಿವಿಗೆ ಕಾದ ಸೀಸವನ್ನು ಉಯ್ಯುತ್ತಿದ್ದರು, ಪಠಿಸಿದರೆ ನಾಲಿಗೆಯನ್ನು ಕತ್ತರಿಸುತ್ತಿದ್ದರು. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಜನರಿಗೆ ದನಿಯಾಗಿ ಅವರೆಲ್ಲರನ್ನು ಮೇಲೆತ್ತಿ ಸಮಾನತೆಯ ಮಂತ್ರವನ್ನು ಪಠಿಸಿ ಬೆಳಕಾದವರು ಬಸವಾದಿ ಶರಣರು. ಸಾವಿರಾರು ವರ್ಷದ ಕರ್ಮಾಚರಣೆಯಿಂದ ಬೇಸತ್ತು, ಬದಲಾವಣೆಯ ಸಮಸಮಾಜವನ್ನು ನಿರ್ಮಿಸುವ ಗುರಿಹೊತ್ತು, ಸಮಾನ ಮನಸ್ಕರನ್ನು ಒಡಗೂಡಿ ಸಮತೆಯ ಜ್ಯೋತಿ ಬೆಳಗಿಸುವ ಕಾಯಕ ನೆರವೇರಿಸಿದರು. ಅನುಭವಮಂಟಪ ನಿರ್ಮಿಸಿ ಸರ್ವರಿಗೂ ಇಷ್ಟಲಿಂಗವನ್ನು ನೀಡಿ ಅಲ್ಲಮರನ್ನು ಪೀಠದಲ್ಲಿ ಕುಳ್ಳಿರಿಸಿ ವಿಚಾರಕ್ರಾಂತಿಗೆ ಆಹ್ವಾನ ನೀಡಿ ಪ್ರತಿಯೋರ್ವರಿಗೂ ಮಾತುಕೊಟ್ಟವರು ಬಸವಣ್ಣನವರು. ಎಲ್ಲರೂ ಚರ್ಚೆಯಲ್ಲಿ ಪಾಲ್ಗೊಂಡು ತಮ್ಮ ವಿಚಾರವನ್ನು ವಚನ ರಚನೆಗಳ ಮೂಲಕ ಮಂಡಿಸುತ್ತಿದ್ದರು. ಸ್ತ್ರೀಪುರುಷರೆಂಬ ಭೇದವನ್ನು ಅಳಿಸಿಹಾಕಿ ಅಕ್ಕಮಹಾದೇವಿಯು ಕನ್ನಡದ ಮೊದಲ ಕವಯತ್ರಿಯಾಗಿ ಬೆಳೆಯಲು ಅವಕಾಶ ನೀಡಿದರು. ಕೂಡಲಸಂಗನ ಶರಣರನ್ನೆಲ್ಲಾ ಕುಲಜರೆಂಬೆ ಎಂದು ಬಸವಣ್ಣ ಹೇಳುತ್ತಿದ್ದರು. ಅದನ್ನು ಆಚರಣೆಗೆ ತಂದಿದ್ದರು. “ಆವ ಕುಲವಾದಡೇನು

ಶಿವಲಿಂಗವಿದ್ದವನೆ ಕುಲಜನು ಕುಲವನರಸುವರೆ ಶರಣರಲ್ಲಿ ಜಾತಿಸಂಕರನಾದ ಬಳಿಕ"[1] ಎನ್ನುವ ಭಾವ ಎಲ್ಲಾ ಶರಣರಲ್ಲಿಯೂ ಮನೆಮಾಡಿತ್ತು.

ಬಸವಾದಿ ಶರಣರ ಸಾಮಾಜಿಕ ಚಳುವಳಿಯು ದಿನೇದಿನೇ ಹೊಸ ತಿರುವನ್ನು ಪಡೆಯುತ್ತಾ, ಪರಿಷ್ಕೃತವಾಗುತ್ತಾ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳತೊಡಗಿತು. ಕಲ್ಯಾಣದಲ್ಲಿ ಬಿಜ್ಜಳ ಚಕ್ರವರ್ತಿಯಾಗಿದ್ದರೂ ಬಸವಣ್ಣನವರಿಗಿದ್ದ ಪ್ರಭಾವವಲಯ ಇವನಿಗಿರಲಿಲ್ಲ. ಇದೂ ಒಂದು ಆತಂಕವಾಗಿ ಬಿಜ್ಜಳನಿಗೆ ಕಾಡುತ್ತಿತ್ತು. ಪುರೋಹಿತಶಾಹಿ ವರ್ಗದವರೂ ಕೂಡಾ ಶರಣರ ಮೇಲೆ ಹಗೆ ಸಾಧಿಸುತ್ತಿದ್ದರು. ಪ್ರತಿಯೋರ್ವ ಶರಣರು ತಮ್ಮ ಪಾಲಿನ ಕಾಯಕದ ಮೂಲಕ ಸ್ವಾಭಿಮಾನದ ಬದುಕನ್ನು ನಡೆಸುತ್ತಿದ್ದರು. ಇದರಿಂದ ಅವರು ಆರ್ಥಿಕವಾಗಿ ಸ್ಥಿರತೆಯನ್ನು ಕಾಪಾಡಿಕೊಂಡಿದ್ದರು. ಸ್ವತಂತ್ರ ವಿಚಾರಗಳ ಮೂಲಕ ಸಮಾಜದ ಕೆಟ್ಟ ದುರಾಚಾರಗಳನ್ನು ತಮ್ಮ ವಚನಗಳ ಮೂಲಕ ಖಂಡಿಸಿ, ಅದನ್ನು ಪ್ರಚುರಪಡಿಸಿ ಜನರನ್ನು ಎಚ್ಚರಿಸುವ ಕೆಲಸ ಮಹಾಮನೆಯಲ್ಲಿ ಪ್ರತಿದಿನವೂ ನಡೆಯುತ್ತಿತ್ತು. ಇದರ ವ್ಯಾಪಕತೆಯು ಸಮಾಜದಲ್ಲಿ ಬದಲಾವಣೆಯ ವಾತಾವರಣವನ್ನು ನಿರ್ಮಿಸಿತ್ತು. "ಬಸವಣ್ಣನವರ ಪ್ರಕಾರ ಸಮಗಾರ ಹರಳಯ್ಯ ಎಂದರೆ ಸಮಗಾರ ಜಾತಿಯ ಹರಳಯ್ಯ ಅಲ್ಲ; ಪಾದರಕ್ಷೆಗಳನ್ನು ಹೊಲಿಯುವ ಕಾಯಕದ ಹರಳಯ್ಯ, ಡೋಹರಕಕ್ಕಯ್ಯ, ಮಡಿವಾಳ ಮಾಚಿದೇವ, ಅಂಬಿಗರ ಚೌಡಯ್ಯ, ಹಡಪದ ಅಪ್ಪಣ್ಣ ಮುಂತಾದ ಶರಣರನ್ನು ಹೀಗೆಯೆ ಅರ್ಥಮಾಡಿಕೊಳ್ಳಬೇಕು ಎಂಬುದು ಬಸವಣ್ಣನವರ ಆಶಯವಾಗಿತ್ತು."[2] ಬಹಳ ತ್ವರಿತಗತಿಯಲ್ಲಿ ಶರಣರ ಚಿಂತನೆಗಳು ಆಚರಣೆಗೆ ಬರಲು ಶುರುಹಚ್ಚಿದವು. ಬಸವಣ್ಣನ ಪ್ರಭಾವದಿಂದ ಇಷ್ಟಲಿಂಗಧಾರಣೆ ಮಾಡಿಸಿಕೊಂಡು ಕುಲಜರಾಗಿದ್ದ ಹರಳಯ್ಯ ಮತ್ತು ಮಧುವರಸರು ಮಕ್ಕಳಿಗೆ ಮದುವೆ ಮಾಡಲು ಸಮ್ಮತಿಸಿ ಶರಣರ ಸಮ್ಮುಖದಲ್ಲಿ ಅದು ನೆರವೇರಿತು. ಇದನ್ನೇ ನೆಪಮಾಡಿಕೊಂಡ ವರ್ಣಾಶ್ರಮಿಗಳು ವರ್ಣಸಂಕರವಾಯಿತೆಂದು ಪ್ರಚುರಪಡಿಸಿ, ರಾಜ ಮತ್ತು ಬಸವಣ್ಣನವರಿಗಿದ್ದ ಸಂಬಂಧವನ್ನು ಕಿತ್ತುಹಾಕಿಸಿ, ಹರಳಯ್ಯ ಮಧುವರಸರಿಗೆ ಎಳೆಹೂಟೆ ಶಿಕ್ಷೆಯನ್ನು ನೀಡಿ ಕೊಲ್ಲಿಸಿದರು. ಕಲ್ಯಾಣದಲ್ಲಿ ಕ್ರಾಂತಿ ನಡೆಯಿತು. ಸಾವಿರಾರು ಶರಣರ ತಂಡ ಚನ್ನಬಸವಣ್ಣನವರ ನೇತೃತ್ವದಲ್ಲಿ ವಚನಪರಂಪರೆಯ ಸಂರಕ್ಷಣೆಗೋಸ್ಕರ ಅಳಿವಿನಿಂದ ಉಳಿವಿಗೆ ಪ್ರಯಾಣ ಬೆಳೆಸಿ ಮಾರ್ಗದಲ್ಲಿ ಕಂಡುಂಡ ನೋವುಗಳು, ಪಡೆವ ಸಹಕಾರ ಎಲ್ಲವನ್ನೂ ಒಳಗೊಂಡಂತೆ ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರ ಅಳಿವಿನಿಂದ ಉಳಿವಿಗೆ ಕಾದಂಬರಿ ಬಿತ್ತರಿಸಿದೆ. ಕಲ್ಯಾಣಕ್ರಾಂತಿಯ ನಂತರದ ಘಟನೆಗಳನ್ನು ವಿಶ್ಲೇಷಿಸುವ ಜವಾಬ್ದಾರಿಯನ್ನು ಕಾದಂಬರಿ ಹೊತ್ತುಕೊಂಡಿದೆ.

ಕಲ್ಯಾಣದ ಹಲವಾರು ಶರಣರ ಬಗೆಗೆ, ಅಲ್ಲಿಯ ಘಟನೆಗಳ ಬಗೆಗೆ ತಲಸ್ಪರ್ಶಿಯಾಗಿ ಅಧ್ಯಯನ ನಡೆಸಿ ವೈಚಾರಿಕ ಚಿಂತನೆಯ ನೆಲೆಯಲ್ಲಿ ಕಾದಂಬರಿಗಳನ್ನು ರಚಿಸಿಕೊಟ್ಟು ಶರಣಸಾಹಿತಿ ಎಂದೇ ಪ್ರಖ್ಯಾತರಾದವರು ಡಾ. ಎಚ್. ತಿಪ್ಪೇರುದ್ರಸ್ವಾಮಿ. ಪ್ರಸ್ತುತ ಅವರ ಅಳಿವಿನಿಂದ ಉಳಿವಿಗೆ ಕಾದಂಬರಿಯನ್ನು ಸಂಶೋಧನೆಯ ನೆಲೆಯಲ್ಲಿ ವಿಶ್ಲೇಷಿಸಲಾಗಿದೆ.

**ವಸ್ತು–ವಿಷಯ**

ಕಲ್ಯಾಣಕ್ರಾಂತಿ ಆದನಂತರ ನಡೆದ ಹಲವು ವಿಪ್ಲವಗಳು ಶರಣರನ್ನು ಕಂಗೆಡಿಸಿದ್ದವು. ಏಕಾಏಕಿ ಬಿಜ್ಜಳನ ಮಗ ಸೋವಿದೇವ ಶರಣರಿಗೆಲ್ಲಾ ಬಹಿಷ್ಕಾರ ಹಾಕಿ ಅವರನ್ನೆಲ್ಲಾ ಗಡಿಪಾರು ಮಾಡಿ ಪುರೋಹಿತಶಾಹಿ ವರ್ಗದ ಒಲವನ್ನು ಉಳಿಸಿಕೊಂಡಿದ್ದನು ಇದೇ ಅವನ ಉದ್ದೇಶವಾಗಿತ್ತು. ಕಲ್ಯಾಣಕ್ರಾಂತಿಯ ನಂತರದ ಘಟನೆಗಳು ಇದರ ವಸ್ತುವಾದರೆ, ಅಲ್ಲಿ ಶರಣರು ಅನುಭವಿಸಿದ ನೋವುಗಳನ್ನು ಬಿತ್ತರಿಸುವುದು ಇದರ ಪ್ರಧಾನ ವಿಷಯವಾಗಿದೆ.

**ಉದ್ದೇಶ**

ಟಿ.ಎಸ್. ಎಲಿಯಟ್ ಕಾದಂಬರಿ ಬಗೆಗೆ ಒಂದು ಅಭಿಪ್ರಾಯವನ್ನು ಹೇಳಿದ್ದಾನೆ. "ಒಂದು ಕೃತಿ ಸಾಹಿತ್ಯಕೃತಿ ಹೌದೋ ಅಲ್ಲವೋ ಎಂಬುದನ್ನು ಕೇವಲ ಸಾಹಿತ್ಯಕ ಮಾನದಂಡಗಳು ಪಾತ್ರನಿರೂಪಣೆ, ಕಥಾಸಂವಿಧಾನ, ಭಾಷೆಯ ಉಪಯೋಗ, ತಾಂತ್ರಿಕ ಸಾಮಂಜಸ್ಯ ಇತ್ಯಾದಿ ಮಾತ್ರ ನಿರ್ಧರಿಸಬಲ್ಲವು. ಆದರೆ ಆ ಕೃತಿಯ ಹಿರಿಮೆಯನ್ನು ನಿರ್ಧರಿಸುವುದಕ್ಕೆ ಕೇವಲ ಸಾಹಿತ್ಯಕ ಮಾನದಂಡಗಳು ಸಾಕಾಗುವುದಿಲ್ಲ. ಉತ್ತಮ ಕಾದಂಬರಿಯ ಅನುಭಾವ ಪ್ರಪಂಚ, ಬದುಕಿನ ಬಗೆಗೆ ನಮಗಿರುವ ಪ್ರಜ್ಞೆಯನ್ನು ವಿಸ್ತರಿಸಬೇಕು. ಹೊಸದೊಂದು ದೃಷ್ಟಿಕೋನವೊಂದರ ಸಾಧ್ಯತೆಯನ್ನು ಬಿಂಬಿಸಬೇಕು. ನಿರೀಕ್ಷಣ ಸಾಮರ್ಥ್ಯವನ್ನು ಹರಿತಗೊಳಿಸಿಕೊಳ್ಳಬೇಕು. ಇದೆಲ್ಲ ಸಾಧ್ಯವಾಗುವುದು ಕಾದಂಬರಿಕಾರನಿಗೆ ತಾನು ಚಿತ್ರಿಸುತ್ತಿರುವ ಅನುಭವದಲ್ಲಿ ಈ ಹಿಂದೆ ಗಮನಕ್ಕೆ ಬಾರದೆ ಉಳಿದಿದ್ದ ಜೀವನದ ಮೂಲಭೂತ ಸಮಸ್ಯೆಗಳ ಆಂತರಿಕ ತೊಡಕುಗಳ ಬಗ್ಗೆ ಇರುವ ಆಳವಾದ ತಿಳುವಳಿಕೆಯಿಂದ. ಈ ತಿಳುವಳಿಕೆ ಅವನ ವೈಚಾರಿಕತೆಯ ಫಲವಾಗಿದೆ."[೩] ಈ ವ್ಯಾಖ್ಯಾನಕ್ಕೆ ಪೂರಕವಾಗಿಯೇ ಈ ಕಾದಂಬರಿ ರಚನೆಯಾಗಿದೆ. ಕಲ್ಯಾಣಕ್ರಾಂತಿಯ ನಂತರ ಚನ್ನಬಸವಣ್ಣ ಒಂದು ದೊಡ್ಡ ಶರಣರ ತಂಡದೊಡನೆ ಉಳವಿಗೆ ಬಂದನೆಂಬುದು ಐತಿಹಾಸಿಕ ಸತ್ಯ. ಉಳವಿಯಲ್ಲಿ ಆತನ ಗದ್ದುಗೆಯಿದ್ದು, ಆ ಕಾರ್ಯ ಇವನಿಂದ ನೆರವೇರಿತು ಎಂಬುದಕ್ಕೆ ಪುಷ್ಟಿಯನ್ನು ನೀಡುತ್ತದೆ. ಹಾಗೆ ಶರಣರು ಕಲ್ಯಾಣದಿಂದ ಉಳವಿಗೆ ಬಂದ ಮಾರ್ಗವನ್ನು ಗುರುತಿಸುವ ಪ್ರಯತ್ನವನ್ನೂ ಇಲ್ಲಿ ಮಾಡಲಾಗಿದೆ. "ಇದು ಕೇವಲ ಕಾಲ್ಪನಿಕ ಕಥಾನಕವಾಗದೆ, ಪರಂಪರಾಗತವಾಗಿ ಬಂದ ಇತಿಹಾಸದ ಎಳೆಗಳನ್ನು ಶರಣರ ಅನುಭಾವಿಕ ನಿಲವಿನ ಹಿನ್ನೆಲೆಯಲ್ಲಿ ಪರಿಭಾವಿಸಿ ಸ್ಪಷ್ಟಪಡಿಸಬೇಕೆಂಬುದೇ ಇದರ ಉದ್ದೇಶ."[೪] ಎಂಬ ಲೇಖಕರ ಈ ಮಾತುಗಳು ಶೋಧನಾದೃಷ್ಟಿಗೆ ಸಾಕ್ಷಿಯಾಗಿದೆ.

**ನಿರೂಪಣೆ ಮತ್ತು ಶೈಲಿ**

ಈ ಕಾದಂಬರಿಯಲ್ಲಿ ಕಲ್ಯಾಣಕ್ರಾಂತಿ ನಡೆದ ನಂತರ ಉಳವಿಗೆ ಶರಣರೆಲ್ಲಾ ಬಂದು ನೆಲೆಸಿ ಗೋವೆಯ ಕದಂಬರ ಆಶ್ರಯದಲ್ಲಿ ತಮ್ಮ ಪ್ರಕ್ರಿಯೆಯನ್ನು ಮುಂದುವರಿಸುತ್ತಾರೆ. ಇದಲ್ಲದೇ, ಅಕ್ಕನಾಗಮ್ಮ, ಚನ್ನಬಸವಣ್ಣ, ಸೊಡ್ಡಳಬಾಚರಸರು ಮುಖ್ಯ ನಿರೂಪಕರಾಗಿ ಕಲ್ಯಾಣದ ಹಾದಿಯಿಂದ ಉಳವಿಯವರೆಗೆ ನಡೆದಂತಹ ಪ್ರತಿಯೊಂದು ಘಟನೆಯನ್ನು, ಐಕ್ಯರಾದ ಶರಣನ್ನು ಸ್ಮರಿಸಿಕೊಳ್ಳುತ್ತಾ, ಕಲ್ಯಾಣಕ್ರಾಂತಿಯಿಂದಾದ ನೋವುಗಳಿಗೆ ಮರುಗುತ್ತ, ವಚನಸಾಹಿತ್ಯದ ಓಲೆಗರಿಗಳನ್ನು ಸಂರಕ್ಷಿಸಲು ಕೈಗೊಂಡ ಚಾಣಾಕ್ಷತೆಯನ್ನು ನೆನೆಯುವ ಸಂಗತಿ ಬರುತ್ತದೆ. ಹೀಗೆ ಕೃತಿಯುದ್ದಕ್ಕೂ ಶರಣಧರ್ಮದ ಅಸ್ತಿತ್ವವನ್ನು ಮುಂದಿನ ತಲೆಮಾರಿಗೂ ತಲುಪಿಸಲಿಕ್ಕಾಗಿ ಮರಣವೇ ಮಹಾನವಮಿ ಎಂಬಂತೆ ಕ್ಷಣಕ್ಷಣಕ್ಕೂ ಎಚ್ಚರಗೊಳ್ಳುವ ಪ್ರಜ್ಞೆಯನ್ನು ಅವಲೋಕಿಸಿಕೊಳ್ಳುತ್ತಾ ನಿರೂಪಣೆಯೊಳಗೊಂದು ನಿರೂಪಣೆಯನ್ನು ತಂದು ಕಲ್ಯಾಣಕ್ರಾಂತಿಯ ಹಿಂದು-ಮುಂದುಗಳನ್ನು ತಿಳಿಸುವಂತೆ ಸಿಂಹಾವಲೋಕನ ಕ್ರಮವನ್ನು ಇಲ್ಲಿ ಲೇಖಕರು ಅನುಸರಿಸಿ ನಿಜಕ್ಕೂ ಅದರ ಫಲ ಸಾರ್ಥಕಗೊಳ್ಳುವಂತೆ ಮಾಡಿದ್ದಾರೆ. ಎಲ್ಲಿಯೂ ವಿಷಯಾಂತರ ಮಾಡದೇ ಏಕತಾನತೆಯನ್ನು ಕಾಯ್ದುಕೊಂಡಿದ್ದಾರೆ. ಇಲ್ಲಿ ಸರಳಗನ್ನಡದ ಬಳಕೆಯ ಜೊತೆಗೆ, ಔಚಿತ್ಯವರಿತು ಶರಣರಿಂದಲೇ ಉಕ್ತಿಸಿದ ವಚನಗಳು ಕಲ್ಯಾಣದ ಅನುಭವಮಂಟಪದ ವೈಭವವು ಕಣ್ಮುಂದೆ ಗೋಚರವಾಗುವಂತೆ ಬಂದಿವೆ. ಮೇಲಿನ ನಿರೂಪಣೆಗೆ ರಾಜರ ಮಾತೆ ಮೈಲಾಳದೇವಿ, ಪೆರ್ಮಾಡಿದೇವ ಮತ್ತು ವಿಜಯಾದಿತ್ಯ ಮೂವರೂ ಶ್ರೋತೃಗಳಾಗಿ ಕಂಡುಬಂದಿದ್ದಾರೆ. ಇದರೊಂದಿಗೆ ಓದುಗನ ಮನಸ್ಸು ಆಯಾಯ ಸಂದರ್ಭವನ್ನು ಕಲ್ಪಿಸಿಕೊಳ್ಳುವಂತೆ ಶೈಲಿಯು ಪರಿಣಾಮಕಾರಿಯಾಗಿ ಮೂಡಿಬಂದಿದೆ.

**ವಿಭಾಗೀಕರಣ ಮತ್ತು ವಿಶ್ಲೇಷಣೆ**

ಕಾದಂಬರಿಯ ಉದ್ದೇಶವೇನೆಂಬುದು ಈಗಾಗಲೇ ಸ್ಪಷ್ಟವಾಗಿದೆ. ವಿಷಯ ನಿರೂಪಣೆಯಲ್ಲಿ ಎಲ್ಲಿಯೂ ಘಟನಾಸರಣಿಯು ವ್ಯತ್ಯಾಸವಾಗಬಾರದೆಂಬ ಕಾರಣಕ್ಕಾಗಿ ಕ್ರಮಬದ್ಧವಾದ ೭ ವಿಭಾಗಗಳನ್ನು ಮಾಡಿಕೊಂಡು ವಿಶ್ಲೇಷಿಸಿದ್ದಾರೆ. ಆ ಕ್ರಮಗಳನ್ನು ಮುಂದೆ ವಿವರಿಸಲಾಗಿದೆ.

❖ **ಬಯಕೆಯ ಬಿತ್ತಿ** : ಪ್ರಕೃತಿಯ ಮಡಿಲಿನಲ್ಲಿರುವ ಮಲೆನಾಡಿನ ಉಳವಿಯ ಸಂಜೆಯ ಸೌಂದರ್ಯವನ್ನು, ಹಕ್ಕಿಗಳ ಕೂಜನವನ್ನು, ಗಿರಿಶಿಖರಗಳ ಮೇರೆಯನ್ನು ವರ್ಣಿಸುತ್ತಾ ಆರಂಭವಾಗಿ, ರಾಜಮಾತೆಯೊಂದಿಗೆ ಅಕ್ಕನಾಗಮ್ಮನವರು ಕಲ್ಯಾಣಕ್ರಾಂತಿಯ ಮುಂದಿನ ಮತ್ತು ಆ ಸಂದರ್ಭದ ಕೆಲವು ಸನ್ನಿವೇಶಗಳಿಗೆ ಸತ್ಯದ ಸ್ಪರ್ಶವನ್ನು ಕೊಡುತ್ತಾ ಸ್ಪಷ್ಟೀಕರಿಸುತ್ತಾ ಸಾಗುತ್ತಾಳೆ. ಈ ಮಾತುಗಳು ರಾಜಮಾತೆಗೆ ಸಂಪೂರ್ಣ ಘಟನೆಯನ್ನು ಕೇಳಬೇಕೆಂಬ ಕುತೂಹಲವನ್ನು ಹೆಚ್ಚಿಸುತ್ತಾ ಮುಂದಿನ ಭಾಗಕ್ಕೆ ಜಿಗಿಯುತ್ತದೆ.

❖ **ಧರೆಹತ್ತಿ ಉರಿದೊಡೆ** : ನಾಗಮ್ಮ, ಚನ್ನಬಸವಣ್ಣ, ಬಾಚರಸ, ಶಿವನಾಗಮಯ್ಯ, ಕಾಳವ್ವೆ ಪ್ರಮುಖರು ಕಲ್ಯಾಣದ ಅನುಭವಮಂಟಪದ ಸುಭಿಕ್ಷದ ದಿನಗಳು, ಬಸವಣ್ಣನವರ ಸಮಾನತೆಯ ಚಿಂತನೆ ಸಾಕಾರವಾದುದರ ಫಲವನ್ನು ವಿವರಿಸಿ, ಹಲವು ಕಾಯಕಗಳಲ್ಲಿ ನಿರತರಾದ ಶರಣರು ತಮ್ಮ ವೃತ್ತಿಯ ಬಗೆಗೆ ಹೊಂದಿದ್ದ ಗೌರವ, ಬಸವಣ್ಣನವರ ಕೀರ್ತಿವಾರ್ತೆಯನ್ನು ಕೇಳಿ ನಾಡಿನ ಮೂಲೆಗಳಿಂದ ಶರಣರು ಬಂದು ನೆಲೆಸಿದುದರ ಸನ್ನಿವೇಶವನ್ನು ನಿರೂಪಿಸುತ್ತಾರೆ. ಶರಣರು ಮುಂದುವರಿದು ಹರಳಯ್ಯ–ಮಧುವರಸರ ಮಕ್ಕಳ ಮದುವೆ ಮಾಡಿಸಿದುದು, ಇದರಿಂದ ಬಂದೊದಗಿದ ರಾಜದ್ರೋಹದ ಅಪವಾದ, ಸಾಮಾಜಿಕ ವಿಪ್ಲವ, ಶರಣರ ಮೇಲೆ ಆದಂತಹ ಧಾಳಿ ಅದರಿಂದ ನೊಂದು ಕಲ್ಯಾಣದಿಂದ ಹೊರನಡೆದ ಸಂಗತಿಗಳು ಇಲ್ಲಿ ಚರ್ಚಿತವಾಗಿವೆ.

❖ **ಅವಿರಳಜ್ಞಾನಿ** : ನಾಗಮ್ಮ ಮತ್ತು ರಾಣಿ ಮೈಲಾಳದೇವಿಯರಿಬ್ಬರ ನಡುವೆ ನಡೆಯುವ ಸಂಭಾಷಣೆಯ ಭಾಗ ಇದಾಗಿದೆ. ಬಸವಣ್ಣನ ಪಾರದರ್ಶಕ ವ್ಯಕ್ತಿತ್ವದ ಬಗ್ಗೆ ಹೆಮ್ಮೆಯನ್ನು ವ್ಯಕ್ತಪಡಿಸುತ್ತಾ, ಚನ್ನಬಸವಣ್ಣನ ಹಿರಿಮೆ–ಗರಿಮೆಯನ್ನು ತಿಳಿಸುವಂತೆ ರಾಣಿ ನಾಗಮ್ಮನಲ್ಲಿ ಕೋರಿಕೊಳ್ಳುತ್ತಾಳೆ. ಅದರಂತೆಯೇ ಆಕೆ ಅವರ ವೃತ್ತಾಂತವನ್ನು ತಿಳಿಸುತ್ತಾ, ಬಸವಣ್ಣನ ವ್ಯಕ್ತಿತ್ವ ಚನ್ನಬಸವಣ್ಣನಿಗೆ ಕನ್ನಡಿಯಾಗಿ ಮಾರ್ಪಟ್ಟ ಸಂಗತಿ, ಮಂಗಳವಾಡೆಯಿಂದ ಕಲ್ಯಾಣದವರೆಗಿನ ಪಯಣದಲ್ಲಿ ಆದ ಸಾಮಾಜಿಕ ಮನ್ವಂತರಗಳಿಗೆ ಇವರೀರ್ವರೂ ಹೇಗೆ ಕಾರಣಕರ್ತರಾಗುತ್ತಾರೆಂಬುದನ್ನು ತಿಳಿಸಿದ್ದಾರೆ. ಈ ನೆಲೆಯಲ್ಲಿ ಈ ಭಾಗವು ಚನ್ನಬಸವಣ್ಣನನ್ನು ಕೇಂದ್ರೀಕರಿಸಿಕೊಂಡಿದೆ.

❖ **ಚಿದಗ್ನಿ ಪ್ರವಾಹ** : ಶರಣರೆಲ್ಲರು ಸಿದ್ಧರಾಮೇಶ್ವರರ ಕಾರ್ಯಕ್ಷೇತ್ರ ಸೊನ್ನಲಿಗೆಗೆ ತೆರಳಿ ಅಲ್ಲಿ ಕೆಲವು ಕಾಲ ನೆಲೆಸಿ ಧರ್ಮದ ಉಳಿವಿನ ಬಗೆಗೆ ಚರ್ಚಿಸಿ ಹಿಂದಿರುಗುವ ಸನ್ನಿವೇಶದಿಂದ ಪ್ರಾರಂಭವಾಗಿ ಅಲ್ಲಲ್ಲಿ ಮಾರ್ಗಮಧ್ಯೆ ಸಿಗುವ ಹಳ್ಳಿಗಳಿಗೆ ಪ್ರವೇಶಿಸಿ ಶರಣಧರ್ಮದ ಸಾರಸತ್ವವನ್ನು ಸಾರುತ್ತ ಸಾಗುವುದರ ಜೊತೆಗೆ ಹಲಸಂಗಿಯಲ್ಲಿ ರಾಜರ ಸೇನೆ ಎದುರಾದಾಗ ಚೆನ್ನಬಸವಣ್ಣನವರ ತಾಳ್ಮೆಯಿಂದ, ಹಲಸಂಗಿಯ ಸಾವಿರಾರು ಜನರು ಶರಣರೊಂದಿಗೆ ಬಂದು ಸೇರಿಕೊಂಡುದರ ಫಲವಾಗಿ ಸೇನೆಯು ಹಿಂತಿರುಗಿದ ಸಂಗತಿಗಳು ಇಲ್ಲಿ ಚರ್ಚಿತವಾಗಿವೆ.

- **ಉಳವಿಯ ಬಾಗಿಲು** : ಈ ಭಾಗದಲ್ಲಿ ಮೈಲಾಳದೇವಿಯ ಮಗ ವಿಜಯಾದಿತ್ಯನು ಹೆಚ್ಚುವರಿ ಶ್ರೋತೃವಾಗಿ ಬಂದು ಶರಣರ ಘಟನೆಗಳನ್ನು ಕೇಳುತ್ತಾನೆ. ಉಳವಿಯ ಸಮೀಪ ಬಂದ ಶರಣರು ಅಲ್ಲಿನ ರಾಜರಿಗೆ ಹೆಬ್ಬಾಗಿಲನ್ನು ನಿರ್ಮಿಸಲು ಹೇಳಿ, ಭವ್ಯ ಸ್ವಾಗತಕೋರುವ ಬಾಗಿಲನ್ನು ಹಾಕಿಸುತ್ತಾರೆ. ಹೀಗೆ ಶರಣರ ಆಶಯದಂತೆ ಉಳವಿಯ ದೊರೆಗಳು ಕೇಳುತ್ತಿರುವಲ್ಲಿಯೇ, ಗೊಡಚಿಯಲ್ಲಿ ಕಲ್ಯಾಣದ ಸೈನ್ಯಕ್ಕೂ ಶರಣರಿಗೂ ಭಯಂಕರ ಯುದ್ಧ ನಡೆದು ಗೋವೆಯ ಕದಂಬರ ಸಹಾಯದೊಂದಿಗೆ ಗೆಲ್ಲುತ್ತಾರೆ. ಈ ನಡುವೆ ಹೊಂಚು ಹಾಕಿ ಮಡಿವಾಳ ಮಾಚಿದೇವರನ್ನು ಕಲ್ಯಾಣದ ಸೈನಿಕರು ಇರಿದು ಕೊಂಡುಬಿಡುತ್ತಾರೆ. ಕಾರಿಮನಿಯಲ್ಲಿ ಮಾಚಯ್ಯನವರ ಸಮಾಧಿಯನ್ನು ನಿರ್ಮಿಸಲಾಯಿತು. ಚನ್ನಬಸವಣ್ಣನ ಬರುವಿಕೆಗಾಗಿಯೇ ಕಾದಿದ್ದ ದಾನಮ್ಮ ಚನ್ನಬಸವಣ್ಣನ ಮಡಿಲಿನಲ್ಲಿಯೇ ಐಕ್ಯವಾಗುವ ಸಂಗತಿ, ಹರಳಯ್ಯನ ಪತ್ನಿ ಕಲ್ಯಾಣಮ್ಮ ತ್ರಿಗುಡಿಯಲ್ಲಿ ಐಕ್ಯವಾದಾಗ ಆ ಊರು ಕಲ್ಲೂರು ಎಂದು ಹೆಸರಾಯಿತು. ಮಲಪ್ರಭೆಯ ತಟದಲ್ಲಿ ಗಂಗಾಂಬಿಕೆಯು ತೀರಾ ಅಂತರ್ಮುಖಿಯಾಗಿ ಬಸವನಾಮ ಸ್ಮರಣೆಯೊಂದಿಗೆ ನಾಗಮ್ಮನ ಮಡಿಲಿನಲ್ಲಿರುವಾಗಲೇ ಬಯಲಾಗುತ್ತಾಳೆ. ಮುನ್ನಡೆದು ಮತ್ತೆ ಕಾದರವಳ್ಳಿಯಲ್ಲಿ ಕದನವಾಗಿ ಅದರ ನೆನಪಿನಾರ್ಥ ಕಾದರವಳ್ಳಿ ಎಂದೇ ನಾಮಾಂಕಿತವಾಯಿತು. ಕಿತ್ತೂರಿನಿಂದ ಮುಂದಿನ ಹಳ್ಳಿಯೊಂದರಲ್ಲಿ ಕಕ್ಕಯ್ಯನವರು ನಂತರ ಅವರ ಪತ್ನಿ ಬಿಷ್ಟದೇವಿಯವರೂ ಐಕ್ಯರಾಗುತ್ತಾರೆ. ಇದರಿಂದ ಈ ಗ್ರಾಮಕ್ಕೆ ಕಕ್ಕೇರಿ ಎಂಬ ಹೆಸರು ಬರುತ್ತದೆ. ಹೀಗೆ ಶರಣರ ಪಯಣ ಮುಂದುವರಿದು ಹೂಬಳ್ಳಿಯನ್ನು ತಲುಪುತ್ತದೆ. ಹಲವಾರು ಶರಣರೊಂದಿಗೆ ಸುಮಾರು ಮೂರು ಸಾವಿರ ತಂಡದೊಂದಿಗೆ ಹೋಗಿ ಅಲ್ಲಿ ಪೂಜಾಕೈಂಕರ್ಯ ಕೈಗೊಂಡ ಕಾರಣಕ್ಕೆ ಆ ಮಠಕ್ಕೆ ಮೂರುಸಾವಿರ ಮಠ ಎಂದು ಹೆಸರಾಯಿತು. ಸ್ಥಳನಾಮಗಳ ಸಾಂಸ್ಕೃತಿಕ ಅಧ್ಯಯನದ ನಿಟ್ಟಿನಲ್ಲಿಯೂ ಲೇಖಕರು ಈ ಕಾದಂಬರಿಯನ್ನು ಪರಿವೀಕ್ಷಿಸಿರುವುದು ಗ್ರಾಮಗಳ ಹೆಸರನ್ನು ಗಮನಿಸಿದಾಗ ತಿಳಿಯುತ್ತದೆ.
- **ಕಾಡಿನಲ್ಲಿ ಕಮ್ಮಟ** : ಎಲ್ಲಾ ಶರಣರು ಉಳವಿಯ ಬಯಲಿನಲ್ಲಿ ಸೇರಿ ಕಮ್ಮಟ ನಡೆಸಿ, ಪರಸ್ಪರ ಮುಂದೆ ಆಗಬೇಕಾದ ಕೆಲಸಗಳ ಕಡೆಗೆ ಗಮನಹರಿಸುತ್ತಾರೆ. ಪ್ರಕೃತಿಯ ಮಡಿಲಿನಲ್ಲಿರುವ ಹಲವು ಗುಹೆಗಳನ್ನು ವೀಕ್ಷಿಸಿ ಆನಂದಗೊಳ್ಳುತ್ತಾರೆ. ಅಲ್ಲೆಲ್ಲಾ ಗೋಷ್ಠಿಗಳನ್ನು ನಡೆಸಿ ಹರ್ಷಿಸುತ್ತಾರೆ. ರುದ್ರಮುನಿಗಳ ಸಮ್ಮುಖದಲ್ಲಿ ನೆರವೇರಿದ ಗೋಷ್ಠಿ ಮುಗಿದ ನಂತರ ಬಾಚರಸರು ಐಕ್ಯರಾದ ಸಂಗತಿ ಈ ಭಾಗದಲ್ಲಿ ಚರ್ಚಿತವಾಗಿದೆ.
- **ಸಮಷ್ಟಿಸಂಗಮ** : ಇದು ಈ ಕಾದಂಬರಿಯ ಕಡೆಯ ಭಾಗವಾಗಿದ್ದು, ಚನ್ನಬಸವಣ್ಣನು ಅಂತರ್ಮುಖಿಯಾಗುತ್ತಾ ಐಕ್ಯವಾಗುವ ಮುನ್ಸೂಚನೆಯನ್ನು ಚಿತ್ರಿಸುತ್ತದೆ. ಶರಣರನ್ನು ತಂಡಗಳಾಗಿ ಎಲ್ಲೆಡೆ ಧರ್ಮ ಬಿತ್ತಲು ಕಳುಹಿಸುವ ಕರ್ತವ್ಯದೊಂದಿಗೆ ಲಿಂಗೈಕ್ಯವಾಗುವ ಸೂಚನೆಯನ್ನು ಪಡೆದು ವಚನಗಳನ್ನು ರಚಿಸುತ್ತಾ, ಹೌದು ಬಸವಣ್ಣಾ ನಾನು ಬರುತ್ತೇನೆ ನೀ ಕೊಟ್ಟ ಕಾರ್ಯವನ್ನು ನಿರ್ವಹಿಸಿದ್ದೇನೆ ಅಣ್ಣ. ನನ್ನನ್ನೂ ಕರೆದುಕೋ ಬಸವಣ್ಣಾ ಎಂದು ಮೇಲೇಳುತ್ತಾ ನಾಗಮ್ಮನ ಮಡಿಲಿನಲ್ಲಿ ಇಲ್ಲವಾಗುತ್ತಾನೆ. ಆ ನಂತರ ಉಳವಿಯಲ್ಲಿ ಚನ್ನಬಸವಣ್ಣನ ದೇವಾಲಯವನ್ನು ನಿರ್ಮಿಸಲಾಯಿತು. ಎಲ್ಲಾ ಶರಣರು ತಂಡೋಪ ತಂಡವಾಗಿ ಬೇರೆ ಬೇರೆ ಭಾಗಗಳಿಗೆ ವಚನಗಳನ್ನು ಕೊಂಡೊಯ್ಯುತ್ತಾ ಶರಣ ಧರ್ಮವನ್ನು ಪ್ರಚುರಪಡಿಸಲು ತೊಡಗಿದುದರೊಂದಿಗೆ ಕಾದಂಬರಿಯ ನಿರೂಪಣೆ ಮುಕ್ತಾಯವಾಗುತ್ತದೆ.

ಒಟ್ಟಾರೆಯಾಗಿ ಕಾದಂಬರಿ ರಚನೆಯ ಹಿಂದಿನ ಉದ್ದೇಶವು ಸಾರ್ಥಕವಾಗಿ ಈಡೇರಿದೆ. ಶರಣರ ಜೀವನದ ಬಗೆಗೆ ಬೆಳಕನ್ನು ಚೆಲ್ಲುವಲ್ಲಿ ಕಾದಂಬರಿ ಯಶಸ್ವಿಯಾಗಿದೆ. ಶರಣರು ತಮಗಾಗಿ ಬದುಕಲಿಲ್ಲ, ಧರ್ಮವನ್ನು ರಕ್ಷಿಸಲೋಸುಗ ತಮ್ಮನ್ನೇ ಸವೆಸಿಕೊಂಡರು. ಪುರೋಹಿತಶಾಹಿ ವರ್ಗದವರು ಶರಣರ ಮೇಲೆ ರಕ್ತಕ್ರಾಂತಿ ಜರುಗುವಂತೆ ಮಾಡಿದರು. ಹೀಗಿದ್ದಾಗಿಯೂ ಕೂಡಾ ಶರಣರ ಚಿಂತನೆಗಳು ಅಜರಾಮರವಾಗಿ ಉಳಿದುಕೊಂಡು ಬಂದವು. ಅದರ ಪ್ರತಿಫಲವಾಗಿ ನಾವಿಂದು ಶರಣರ ವಚನಗಳನ್ನು ಅಧ್ಯಯನ ಮಾಡುವ ಅವಕಾಶ ದೊರೆಯಿತು. ಒಟ್ಟಾರೆಯಾಗಿ ಸಂಶೋಧನಾತ್ಮಕವಾಗಿ ಮೂಡಿಬಂದಿರುವ ಈ

ಕಾದಂಬರಿ ಸತ್ಯಸಂಗತಿಗಳನ್ನು ತಿಳಿಸುವಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಸಿಕ್ಕಂತಹ ಆಧಾರಗಳಿಂದಲೇ ನಿರೂಪಿಸಿದೆ ಎಂದು ಅಭಿಪ್ರಾಯಿಸಬಹುದು.

**ಕೊನೆ ಟಿಪ್ಪಣಿಗಳು**

೧. ಎಂ.ಎಂ ಕಲಬುರ್ಗಿ (ಪ್ರ.ಸಂ) : ಬಸವಯುಗದ ಮಹಾಸಂಪುಟ -೧, ಬಸವಣ್ಣನವರ ವಚನ ಸಂಖ್ಯೆ ೭೧೮, ಪು.ಸಂ ೬೬
೨. ರಂಜಾನ್ ದರ್ಗಾ : ಜಾತಿವ್ಯವಸ್ಥೆಗೆ ಸವಾಲಾದ ಶರಣರು ಕೃತಿಯ ಶರಣರ ಜಾತ್ಯಾತೀತ ನಿಲುವು ಲೇಖನ, ಪು.ಸಂ ೧೪
೩. ಗಿರಡ್ಡಿ ಗೋವಿಂದರಾಜ : ಕಾದಂಬರಿಯಲ್ಲಿ ವೈಚಾರಿಕತೆ, ಮನ್ವಂತರ-೭ ಮೇ ೧೯೬೮ ವಾರ್ಷಿಕ ಸಂಚಿಕೆ, ಪು.ಸಂ ೩೮
೪. ಡಾ. ಎಚ್.ಟಿ. ಶೈಲಜ(ಸಂ) : ಡಾ. ಎಚ್. ತಿಪ್ಪೇರುದ್ರಸ್ವಾಮಿ ಸಮಗ್ರ ಸಾಹಿತ್ಯ ಮಾಲೆ-೫, ಕಾದಂಬರಿ ಸಾಹಿತ್ಯ-೨, ಶರಣಕೇಂದ್ರಿತ ಕಾದಂಬರಿಗಳು-ಅಳಿವಿನಿಂದ ಉಳಿವಿಗೆ, ಮೊದಲ ಮಾತು ಪು.ಸಂ ೪೫

**ಪರಾಮರ್ಶನಾ ಗ್ರಂಥಗಳು**

೧. ಚನ್ನೇಶ್ ಹೊನ್ನಾಳಿ : ಎಚ್. ತಿಪ್ಪೇರುದ್ರಸ್ವಾಮಿ
ಸಾಹಿತ್ಯ ಅಕಾಡೆಮಿ ದೆಹಲಿ ೨೦೧೩

೨. ಚಂದ್ರಶೇಖರ ನಾರಣಾಪುರ : ಕರ್ನಾಟಕದ ವೀರಶೈವ ಮಠಗಳು ಸಂ-೧
ಗೆಳೆಯ ಪ್ರಕಾಶನ ಚಿಕ್ಕಮಗಳೂರು ೨೦೦೨

೩. ಜೋಶಿ ಜೆ.ಬಿ : ಮನ್ವಂತರ-೭ ಮೇ ೧೯೬೮ ವಿಚಾರ ಸಂಕಿರಣ ಕುರ್ತಕೋಟಿ ಕೆ.ಡಿ
ವಿಶೇಷಾಂಕ, ಮನ್ವಂತರ ಪ್ರಕಾಶನ ಧಾರವಾಡ ೧೯೬೮
ಸುಬ್ಬಣ್ಣ ಕೆ.ವಿ

೪. ರಂಜಾನ್ ದರ್ಗಾ : ಜಾತಿ ವ್ಯವಸ್ಥೆಗೆ ಸವಾಲಾದ ಶರಣರು
ಲೋಹಿಯಾ ಪ್ರಕಾಶನ ಬಳ್ಳಾರಿ ೨೦೧೭

ಕರವೇ ನಲ್ನುಡಿ ಮಾಸಪತ್ರಿಕೆ ಮೇ ೧೭-೨೦೧೧
ಮೇದಿನಿಗೆ ಹೊಸಬೆಳಕು ತಂದವರು (ಲೇಖನ)

೫. ಶೈಲಜಾ ಹೆಚ್.ಟಿ : ಡಾ. ಎಚ್. ತಿಪ್ಪೇರುದ್ರಸ್ವಾಮಿ ಸಮಗ್ರ ಸಾಹಿತ್ಯ ಮಾಲೆ-೫,
ಕಾದಂಬರಿ ಸಾಹಿತ್ಯ-೨, ಶರಣಕೇಂದ್ರಿತ ಕಾದಂಬರಿಗಳು-
ಅಳಿವಿನಿಂದ ಉಳಿವಿಗೆ
ಶ್ರೀನಿಜಲಿಂಗೇಶ್ವರ ಗ್ರಂಥಮಾಲೆ
ಜಗದ್ಗುರು ದುರದುಂಡೇಶ್ವರ ಸಿದ್ಧಸಂಸ್ಥಾನ ಮಠ
ನಿಡಸೋಸಿ ಹುಕ್ಕೇರಿ ತಾಲ್ಲೂಕು ೨೦೧೭

೬. ಅಶೋಕ ಶೆಟ್ಟರ್ : ಅವಧಿ ಮಾಸಪತ್ರಿಕೆ ಅಶೋಕ ಶೆಟ್ಟರ್ ಕಾಲಂ
ಉಳವೀಯ ದಾರೀಲಿ ಶರಣಾರ ನೆನೆಯುತ
ಸೆಪ್ಟೆಂಬರ್ ೨೫ ೨೦೧೩